# ಮೈಸೂರ ಗೆಜಿಟ್.

## ಸರ್ಕಾರದಿಂದ ಫಾಯಿಷ್ ಆದ್ದು.

ಸಂ. 44.] ಬೆಂಗಳೂರು, ಗುರುವಾರ, ಜೂ ತಾ॥ 24, ಸ್ 1909. [ನಂ. 25.


## III ನೇ ಚಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ಣಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ತಾರೀಖು 16ನೆ ಜೂ 1909.

ನಂ. ಜು. 3926—ಪೋಲೀಸ್ 152-08-3, ಸ್ 1890ನೆ ಇಸವಿಯ 6ನೆ ರೆಗ್ಯುಲೇಷ್ ಆದ ಮೈಸೂರು ಆಯುಧಗಳ ರೆಗ್ಯುಲೇಷನಿನ 22ನೆ ಪ್ರಕರಣದಿಂದ ತಮಗೆ ಕೊಡೋಣಾದ ಅಧಿಕಾರವನ್ನು ಚಲಾಯಿಸುವುದರಲ್ಲಿ, ಘನವನ್ನು ಹೊಂದಿದ ಶ್ರೀಮರ್ ಮೈಸೂರು ಮಹಾರಾಜಾ ಸಾಹೇಬ್ಬಹದರವರ ಸರ್ಕಾರದವರು 1905ನೆ ಇಸವಿ ಡಿಸೆಂಬರ್ 26ನೆ ತಾರೀಖಿನ ಜು. 1782—ಪೋಲೀಸ್ ಮಿಸ್. 6 ನೆ ನಂಬರ್ ಇಸ್ತಿಹಾರ್ನಾಮೆಯೊಂದಿಗೆ ಕೊಡೋಣಾದ ನಿಬಂಧನೆಗಳ ಪೈಕಿ 1ನೆ ಪ್ಯಾರಾವಿನ 3ನೆ ಕಲಮಿಗೆ ಇದರಡಿ ಕಂಡ ಹೆಚ್ಚು ಅಂಶಗಳನ್ನು ಸೇರಿಸಿಕೊಳ್ಳತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ :—

"ಪರಂತು ಮೈಸೂರು ಸಂಸ್ಥಾನದ ಸೈನ್ಯಗಳಿಗಾಗಲಿ ಅಥವಾ ಬ್ರಿಟಿಷ್ ಇಂಡಿಯಾವಿನ ಸೈನ್ಯಕ್ಕಾಗಲಿ ಸೇರಿದ ಒಬ್ಬ ದೇಶೀಯ ಸಿಪಾಯಿಯು ತನ್ನ ರಜೆಮೆಂಟಿನಿಂದ ರಜಾದಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ತನ್ನ ಕಮ್ಯಾಂಡಿಂಗ್ ಆಫಿಸರಿಂದ ಕೊಡಲ್ಪಡುವ ಪ್ಯಾಸಿನಲ್ಲಿ ನಮೂದಿರುವ ಆಯುಧಗಳ ವಿಷಯದಲ್ಲಿ ಮಾತ್ರ ವಿನಾಯಿಸಲ್ಪಡತಕ್ಕದ್ದು."

"ವಿವರಣೆ.—ಈ ಕಲಮಿನಲ್ಲಿ ಉಪಯೋಗಿಸಿರುವ "ಸಿಪಾಯಿಗಳು" ಎಂಬ ಮಾತಿನಲ್ಲಿ "ರಿಜರ್ವಿಸ್ಟ್ಗಳು" ಸೇರುವದಿಲ್ಲ."

ಹುಕುಂ ಬಮೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಆಫಿಷಿಯೇಟಿಂಗ್ ಸೆಕ್ರೆಟರಿ.

## ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರಟೆರಿಯಟರ ಆಫೀಸು.

ಬೆಂಗಳೂರು, ತಾರೀಖು 16ನೆ ಜೂನ್ 1909.

ನಂಬರ 317—ಲೆ. ಕಾರ್ಯ.

### ಇಸ್ತಿಹಾರ್ನಾಮೆ.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯನಿರ್ವಾಹದ ಬಗ್ಗೆ ಏರ್ಪಡಿಸಿರುವ ನಿಬಂಧನೆಗಳ ಪೈಕಿ 40ನೆ ನಿಬಂಧನೆಯನ್ನನುಸರಿಸಿ, ಮೈಸೂರು ವಿಷಪದಾರ್ಥಗಳ ಬಿಲ್ಲಿನ ಆಲೋಚನೆಯ ಬಗ್ಗೆ ನಿಯಮಿಸಲ್ಪಟ್ಟ ನಿಯುಕ್ತ ಸಮಾಜದ (Select Committee) ಇದರಡಿ ಕಂಡ ರಿಪೋರ್ಟನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಿ ಇರುತ್ತದೆ.

ಹುಕುಂ ಖನೋಜೀಬ್,

ಎಸ್. ಹಿರಿಯಣ್ಣಯ್ಯ, ಸೆಕ್ರೆಟರಿ,

ಮೈಸೂರು ನ್ಯಾಯವಿಧಾಯಕ ಸಭೆ.

### ಮೈಸೂರು ವಿಷಪದಾರ್ಥಗಳ ಬಿಲ್ಲಿನ ವಿಷಯವಾಗಿ ನಿಯುಕ್ತ ಸಮಾಜದವರು ಬರೆಸಿರುವ ರಿಪೋರ್ಟು.

ಎಲ್ಲಾ ತರಹೆಯ ವಿಷ ಪದಾರ್ಥಗಳನ್ನೂ ಕೆಲವು ಸ್ಥಳಗಳಲ್ಲಿ ಸ್ವಾಧೀನದಲ್ಲಿಟ್ಟುಕೊಂಡಿರುವುದು, ಖರೀದಿ ಮಾಡುವುದು; ಮುಖ್ಯವಾಗಿ ಇಲ್ಲಿ ಪಾಷಾಣವನ್ನು ಆಮದುಮಾಡಿಕೊಳ್ಳುವುದು, ಸ್ವಾಧೀನದಲ್ಲಿಟ್ಟುಕೊಂಡಿರುವುದು ಮತ್ತು ಖರೀದಿಮಾಡುವುದು— ಇವುಗಳನ್ನು ಕ್ರಮಪಡಿಸುವ ಬಗ್ಗೆ ಹುಟ್ಟಿದ ಬಿಲ್ಲನ್ನು ಪರ್ಯಾಲೋಚನೆಯ ಬಗ್ಗೆ ನಿಯುಕ್ತ ಸಮಾಜದ ಮೆಂಬರುಗಳಾದ ನಮ್ಮ ಗಳಿಗೆ ವಹಿಸೋಣವಾಗಿತ್ತಷ್ಟೆ. ಸದರಿ ಬಿಲ್ಲಿನ ವಿಚಾರವಾಗಿ ನಾವುಗಳು ರಿಪೋರ್ಟು ಮಾಡುವದೇನಂದರೆ :—

ಈ ಬಿಲ್ಲಿನಲ್ಲಿ ಅಡಗಿರುವ ವಿಧಿಗಳೆಲ್ಲವನ್ನೂ ಈ ವಿಚಾರವಾಗಿ ಹೊರಗಣಿಂದ ಬಂದ ಸಲಹೆಗಳನ್ನೂ ಪರ್ಯಾಲೋಚನೆಯಾಗಿ ನ್ಯಾಯವಿಧಾಯಕಸಭೆಯವರು ಈ ಬಿಲ್ಲನ್ನು ಇದರಡಿ ಕಂಡ ತಿದ್ದುಪಾಟುಗಳ ಸಮೇತ ಅಂಗೀಕರಿಸಬಹುದಾಗಿದೆ ಎಂದು ನಾವುಗಳು ಅಭಿಪ್ರಾಯಪಡುತ್ತೇವೆ.

1. ಕಲಂ 4, ಒಳ ಕಲಂ (2).

ಈ ವಿಚಾರವಾದ ತಿದ್ದುಪಾಟನ್ನು ಕನ್ನಡದಲ್ಲಿ ಮೊದಲೇ ಮಾಡಿರುತ್ತದೆ.

2. ಕಲಂ 10, ಒಳ ಕಲಂ (1) (b).

ಈ ಒಳಕಲಮಿನಲ್ಲಿರುವ "ಮೈಸೂರು ಸೀಮೆಯಲ್ಲಿ" ಎಂಬ ಮಾತುಗಳಿಗೆ ಬದಲಾಗಿ ಬ್ರಿಟಿಷ್ ಇಂಡಿಯಾ ಆಕ್ಟಿನಲ್ಲಿರುವಂತೆ "ಯುನೈಟೆಡ್ ಕಿಂಗಡಂ ಎಂದರೆ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್‌ಗಳಲ್ಲಿ" ಎಂಬ ಮಾತುಗಳನ್ನು ಸೇರಿಸಬೇಕು. ಯಾಕೆಂದರೆ ರಸಾಯನ ಶಾಸ್ತ್ರಜ್ಞರ ಕೆಲಸ ಮಾಡುವದಕ್ಕಾಗಲಿ, ಔಷಧ ವಿಕ್ರಯಿಸುವವರ ಕೆಲಸ ಮಾಡುವುದಕ್ಕಾಗಲಿ ಫಲಾನಾ ಯೋಗ್ಯತೆಗಳು ಇರಬೇಕೆಂಬ ವಿಚಾರವಾಗಿ ಮೈಸೂರು ಸೀಮೆಯಲ್ಲಿಯಾಗಲಿ, ಬ್ರಿಟಿಷ್ ಇಂಡಿಯಾದಲ್ಲಿಯಾಗಲಿ ಯಾವುದೊಂದು ಕಾನೂನೂ ಜಾರಿಯಲ್ಲಿಲ್ಲವೆಂದು ನಮಗೆ ತಿಳಿಯಬಂದಿದೆ.

3. ಕಲಂ 10, ಒಳ ಕಲಂ (2).

ಈ ಒಳಕಲಮನ್ನು ಇದರಡಿ ಕಂಡ ರೀತಿಯಲ್ಲಿ ಬದಲಾಯಿಸಬೇಕೆಂದು ನಾವು ಅಭಿಪ್ರಾಯಪಡುತ್ತೇವೆ :—

"(2). ಸರ್ಕಾರದವರು ನಮೂದಿಸಬಹುದಾದ ಔಷಧ ಸಂಬಂಧ ವಿಷ ಪದಾರ್ಥಗಳನ್ನು ಖರೀದಿ ಮಾಡುವ ಸಾಮಾನ್ಯ ವೈದ್ಯರ ಅಥವಾ ಪಶುವೈದ್ಯರ ಅಥವಾ ಕೆಮಿಸ್ಟ್ ಅಥವಾ ಡ್ರಗ್ಗಿಸ್ಟ್‌ಗಳ ವಿಷಯದಲ್ಲಿ

(i) ಅವರುಗಳು ಖರೀದಿಮಾಡಿದ ಪದಾರ್ಥಗಳ ರಿಜಿಸ್ಟರುಗಳನ್ನು ಇಡುವ ಬಗ್ಗೆ, ಸದರಿ ರಿಜಿಸ್ಟರುಗಳಲ್ಲಿ ದಾಖಲೆ ಮಾಡಬೇಕಾದ ತಪಶೀಲುಗಳ ವಿಷಯದಲ್ಲಿಯೂ, ಮತ್ತು ಸದರಿ ರಿಜಿಸ್ಟರುಗಳ ಅಜಮಾಯಿಷಿಯ ಬಗ್ಗೆ;

(ii) ಅಂಥಾ ಪದಾರ್ಥಗಳನ್ನು ಬಂದೋಬಸ್ತಾಗಿ ಇಡುವ ಬಗ್ಗೆ, ಅವುಗಳನ್ನು ಖರೀದಿಮಾಡುವ ಅಥವಾ ಖರೀದಿ ಮಾಡುವುದಕ್ಕಾಗಿ ಸದರೀ ಪದಾರ್ಥಗಳನ್ನು ಇಟ್ಟಿರುವ ಪಾತ್ರೆಗಳು, ಬಸ್ತುಗಳು ಅಥವಾ ಪೊಟ್ಟಣಗಳು ಇವುಗಳ ಮೇಲೆ ಚೀಟುಗಳನ್ನು ಅಂಟಿಸುವ ಬಗ್ಗೆ;

(iii) ಮೇಲೆ ಹೇಳಿದ ಯಾವನಾದರೊಬ್ಬ ಮನುಷ್ಯನು ಸದರೀ ಔಷಧ ವಿಷಪದಾರ್ಥಗಳನ್ನು ಖರೀದಿಯ ಬಗ್ಗೆ ಇಟ್ಟುಕೊಂಡಿರುವ ಸಂದರ್ಭದಲ್ಲಿ ಆವೆಗಳನ್ನು ಅಜಮಾಯಿಷಿಮಾಡಿ ಪರೀಕ್ಷಿಸುವ ಬಗ್ಗೆ—

ಸರ್ಕಾರದವರು ನಿಬಂಧನೆಗಳನ್ನು ಏರ್ಪಡಿಸಬಹುದು"

ಮೇಲ್ಕಂಡ ಒಳಕಲಮಿನ ರೀತ್ಯಾ ಸರ್ಕಾರದವರಿಂದ ವಿಧಿಸಲ್ಪಡಬಹುದಾದ ನಿಬಂಧನೆಗಳ ಮೇರೆಗೆ ನಡೆಯದೆ ತಪ್ಪಿದರೆ ದಂಡನೆಯನ್ನು ವಿಧಿಸಬಹುದೆಂಬ ಬಗ್ಗೆ ಮಸೂದಾ ಬಿಲ್ಲಿನಲ್ಲಿ ಯಾವುದೊಂದು ನಿಯಮವನ್ನೂ ನಮೂದಿಸಿಲ್ಲ. ಆದಕಾರಣ 7ನೆ ಕಲಮಿನ 1 (a) ಒಳ ಕಲಮಿನಲ್ಲಿ "4ನೆ ಪ್ರಕರಣದ ಮೇರೆಗಾಗಲಿ" ಎಂಬ ಮಾತುಗಳ ನಂತರ "ಅಥವಾ 10ನೆ ಪ್ರಕರಣದ (2)ನೆ ಒಳ ಪ್ರಕರಣದ ಮೇರೆಗಾಗಲಿ" ಎಂಬ ಮಾತುಗಳನ್ನು ಸೇರಿಸತಕ್ಕದ್ದು ಅವಶ್ಯಕವೆಂದು ನಾವು ಅಭಿಪ್ರಾಯಪಡುತ್ತೇವೆ.

ಈ ಬಿಲ್ಲಿನಲ್ಲಿ ಅಪೇಕ್ಷೀತವೂ ವ್ಯತ್ಯಾಸಗಳನ್ನು ಮಾಡಿಲ್ಲವಾದ ಪ್ರಯುಕ್ತ ಈಗ ನಾವು ಸೂಚಿಸಿರುವ ತಿದ್ದುಪಾಟುಗಳನ್ನು ಸೇರಿಸಿ ಪುನಃ ಈ ಬಿಲ್ಲನ್ನು ಪ್ರಿಂಟಿಸಿ ಮಾಡಬೇಕಾದ ಅಗತ್ಯವಿಲ್ಲವೆಂದು ನಮಿಗೆ ತೋರುತ್ತದೆ.

ನಮ್ಮ ಸಮಾಜದಲ್ಲಿ ವಿಷಯಗಳನ್ನು ಚರ್ಚಿಸಿದ ಕಾಲದಲ್ಲಿ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟೆರಿ ಕಮಿಷನರ್ ಕರ್ನಲ್ ಸ್ಮೈತ್, ಐ. ಎಂ. ಎಸ್. ಯವರೂ ಮತ್ತು ಪಶುವೈದ್ಯರಾದ ಮಿ" ಎ. ನರಸಿಂಹಯ್ಯಂಗಾರ್‌ವರೂ ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದುದರಿಂದ ತುಂಬಾ ಪ್ರಯೋಜನವಾಯಿತೆಂದು ಇಲ್ಲಿ ಸೂಚಿಸುತ್ತೇವೆ.

ಕೆ. ಪಿ. ಪುಟ್ಟಣ್ಣ ಸೆಟ್ಟಿ;

9ನೆ ಜೂನ್ 1909. ಎಸ್. ನಾರಾಯಣರಾವ್;

ಎಂ. ಸಿ. ರಂಗಯ್ಯಂಗಾರ್.